# 2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ. ನ್ಯಾಯಾಲಯ, ನಂಜನಗೂಡು

## ಸಿ. ಸಿ. ನಂ.3731/2021

**ಫಿರ್ಯಾದಿ :** ಆನಂದ ಜಿ ಬಿನ್ ಲೇಟ್ ಗೌರಯ್ಯ
35 ವರ್ಷ, ಮಹದೇವನಗರ ಗ್ರಾಮ
ವಿದ್ಯಾಪೀಠ ಪೋಸ್ಟ್, ಕಸಬಾ ಹೋಬಳಿ, ನಂಜನಗೂಡು.

**ವಿರುದ್ಧ**

**ಆರೋಪಿ :** ಹರ್ಷಿತ ಬಿನ್ ರವಿ
28 ವರ್ಷ, ಆಶಿರ್ವಾದ ನಿಲಯ ,
1082, ಜೆ ಪಿ ನಗರ
2 ನೇ ಹಂತ, ಪೀಣಾಶಿಯ ಆಸ್ಪತ್ರೆ ಎದುರು ,
ಸಬ್ ಪೋಸ್ಟ್ ಹತ್ತಿರ
ಅಕ್ಕಮಹಾದೇವಿ ರಸ್ತೆ, ಮೈಸೂರು

ಪ್ರೊಪ್ರೈಟರ್ ಆಶಿರ್ವಾದ್ ಸರ್ವೀಸ್ ಸ್ಟೇಷನ್
(ಪೆಟ್ರೋಲ್ ಬಂಕ್) ಗೋಳೂರು ಗ್ರಾಮ ಹತ್ತಿರ
ಟಿ ನರಸೀಪುರ – ನಂಜನಗೂಡು ರಸ್ತೆ,
ನಂಜನಗೂಡು ಟೌನ್.

## ಅ. ಪ್ರ. ಸಂ. ಕಲಂ 313ರನ್ವಯ ಆರೋಪಿಯ ಹೇಳಿಕೆ

**ಪ್ರಶ್ನೆ 1ಃ** ನೀವು ಸಾಕ್ಷಿದಾರರ ಹೇಳಿಕೆಗಳನ್ನು ಕೇಳಿದ್ದೀರಾ?

ಉತ್ತರ ಃ

**ಪ್ರಶ್ನೆ 2ಃ** ಪ್ರಾಸಾ-1 ಆನಂದ ಜಿ ಇವರು ತಮ್ಮ ಸಾಕ್ಷ್ಯದಲ್ಲಿ ಹೇಳುವುದೇನೆಂದರೆ ಆರೋಪಿಯಾದ ನೀವು ಹಾಗೂ ಪ್ರಾಸಾ-1 ಪರಿಚಯಸ್ಥರಾಗಿದ್ದು, ಸದರಿ ಪರಿಚಯದ ಆಧಾರದ ಮೇಲೆ ಅಂದರೆ ಪೆಟ್ರೋಲ್ ಬಂಕ್ ವ್ಯವಹಾರಕ್ಕಾಗಿ ಹಣದ ಅವಶ್ಯಕತೆಯಿದೆ ಎಂದು ಪ್ರಾಸಾ-1 ರವರನ್ನು ದಿಃ23.02.2021 ರಂದು ರೂ.1,57,000/- ಗಳನ್ನು ಬ್ಯಾಂಕ್ ಕಾರ್ಡ್ ಮೂಲಕ, ದಿಃ15.03.2021 ರಂದು ರೂ.5,00,000/-ಗಳನ್ನು ನಗದು ಮೂಲಕ, ದಿಃ29.03.2021 ರಂದು ರೂ.3,00,000/-ಗಳನ್ನು ಅಂದರೆ ರೂ.2,25,000/-ಗಳನ್ನು ನಗದು ಮೂಲಕ ಉಳಿಕೆ ರೂ.75000/-ಗಳನ್ನು ಬ್ಯಾಂಕ್ ಕಾರ್ಡ್ ಮೂಲಕ, ದಿಃ07.06.2021 ರಂದು ರೂ.3,50,000/-ಗಳನ್ನು ಅಂದರೆ ರೂ.56,000/-ಗಳನ್ನು ಗೂಗಲ್ ಪೇ ಮೂಲಕ ಉಳಿಕೆ ರೂ.2,94,000/- ಗಳನ್ನು ನಗದು ಮೂಲಕ, ಮತ್ತು ದಿಃ12.08.2021 ರಂದು ರೂ.1,93,000/-ಗಳನ್ನು ನಗದು ಮೂಲಕ ಒಟ್ಟು ರೂ.15,00,000/- ಗಳನ್ನು ಸಾಲವಾಗಿ ಪಡೆದುಕೊಂಡು, ಸದರಿ ಸಾಲವನ್ನು ಮರುಪಾವತಿ ಮಾಡುವುದಾಗಿ ಒಪ್ಪಿರುತ್ತಾರೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ 3** ಪ್ರಾಸಾ-1 ರವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀವು ಸದರಿ ಸಾಲದ ಬಾಬ್ತು ನೀವು ನಿಮ್ಮ ಉಳಿತಾಯ ಖಾತೆಯಿರುವ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಪಾಠಶಾಲೆ ಸ್ಟ್ರೀಟ್, ನಂಜನಗೂಡು ಶಾಖೆಯ ಚೆಕ್ ನಂಃ046442 ಗೆ ರೂ.15,00,000/- ಗಳನ್ನು ದಿನಾಂಕಃ12.08.2021 ಎಂದು ನಮೂದಿಸಿ ಫಿರ್ಯಾದುದಾರರ ಹೆಸರಿಗೆ ನೀಡಿದ್ದು, ತದನಂತರ ಪಿರ್ಯಾದುದಾರರು ಸದರಿ ಚೆಕ್ಕುಗಳನ್ನು ನಗದೀಕರಿಸಿಕೊಳ್ಳಲು ಉಳಿತಾಯ ಖಾತೆಯಿರುವ ಹೆಚ್ ಡಿ ಎಫ್ ಸಿ ಬ್ಯಾಂಕ್, ನಂಜನಗೂಡು ಶಾಖೆಯ ಬ್ಯಾಂಕಿನ ಮೂಲಕ ದಿಃ22.10.2021 ರಂದು ಹಾಜರುಪಡಿಸಿದಾಗ ಸದರಿ ಬ್ಯಾಂಕಿನವರು "ಅಕೌಂಟ್ ಕ್ಲೋಸಡ್' ಎಂಬ ಹಿಂಬರಹದೊಂದಿಗೆ ದಿಃ25.10.2021 ರಂದು ನಗಧೀಕೃತಗೊಳ್ಳದೆ ವಾಪಸ್ಸು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರಃ

**ಪ್ರಶ್ನೆ 4** ಪ್ರಾಸಾ-1 ರವರು ಮುಂದುವರೆದು ಪಿರ್ಯಾದಿ ಪರ ವಕೀಲರ ಮೂಲಕ ದಿಃ08.11.20211 ರಂದು ಕಾನೂನು ರೀತ್ಯಾ ನೋಟಿಸನ್ನು ನೀಡಿದ್ದು, ಸದರಿ ನೋಟೀಸು ಆರೋಪಿಗೆ ಜಾರಿಯಾಗಿದ್ದು, ಆದರೂ ಸಹಾ ಹಣವನ್ನು ಮರುಪಾವತಿ ಮಾಡದೆ ಕಲಂ 138 ನೆಗೋಶಿಯಬಲ್ ಇನ್ಸ್ಟ್ರುಮೆಂಟ್ ಆಕ್ಟ್ ಪ್ರಕಾರ ಅಪರಾಧ ಮಾಡಿರುವಿರಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಇದಕ್ಕೆ ನೀವು ಏನು ಹೇಳುತ್ತೀರಿ?

ಉತ್ತರ ಃ

**ಪ್ರಶ್ನೆ 5** ನಿಮಗೆ ಇನ್ನೂ ಏನಾದರೂ ಹೇಳುವುದು ಇದೆಯಾ?

ಉತ್ತರ ಃ

**ಪ್ರಶ್ನೆ 6ಃ** ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡುವಿರಾ ?

ಉತ್ತರ ಃ

ಫಿರ್ಯಾದುದಾರರ ಪರ ಸಾಕ್ಷಿದಾರರ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ದಿನಾಂಕ 02.02.2026 ರಂದು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

2 ನೇ ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಮ್.ಎಫ್.ಸಿ.
ನಂಜನಗೂಡು.